ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಸಿ1(1)/ಆಡಳಿತ/ಪ್ರಾಶಾಮುಶಿ/ಬಡ್ತಿ/05/2020-21 ದಿನಾಂಕ:23-07-2020

**ಅಧಿಸೂಚನೆ**

ವಿಷಯ:-ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ದಿನಾಂಕ:01-01-2020 ರಲ್ಲಿದ್ದಂತೆ ಸೇವಾ ಜೇಷ್ಠತೆ ಆಧಾರದ ಮೇರೆಗೆ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಪ್ರಕಟಿಸುವ ಕುರಿತು.

ಉಲ್ಲೇಖ:-1)ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ)ನಿಯಮಗಳು 1957 ನಿಯಮ(5) ರಂತೆ.
2)ಸರ್ಕಾರಿ ಪತ್ರ ಸಂಖ್ಯೆ:ಇಡಿ 202 ಎಸ್‌ಎಲ್‌ಬಿ 2014 ದಿನಾಂಕ:20-05-2014.
3)ಸರ್ಕಾರಿ ಪತ್ರ ಸಂಖ್ಯೆ:ಇಡಿ 152 ಎಲ್‌ಬಿಪಿ 2014 ದಿನಾಂಕ:20-05-2014.
4)ಸರ್ಕಾರದ ಪತ್ರ ಸಂಖ್ಯೆ:ಡಿ.ಪಿ.ಎ.ಆರ್186ಎಸ್.ಆರ್.ಎಸ್2018 ಬೆಂಗಳೂರು ದಿ:15-05-2019.

- * * * * * -

ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ವೃಂದದ ದಿನಾಂಕ:01-01-2020 ರಲ್ಲಿದ್ದಂತೆ ಸೇವಾ ಜೇಷ್ಠತೆ ಆಧಾರದ ಮೇರೆಗೆ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯನ್ನು ಸಿದ್ಧಗೊಳಿಸಿ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಪ್ರಕಟಿಸಲಾಗುತ್ತಿದೆ. ಸದರಿ ಪಟ್ಟಿಗೆ ಆಕ್ಷೇಪಣೆಗಳೆನಾದರೂ ಇದ್ದರೆ 05 ದಿನಗಳ ಕಾಲಾವಕಾಶ ನೀಡಿದೆ. ಸದರಿ ಆಕ್ಷೇಪಣೆಯನ್ನು ದಿನಾಂಕ:27-07-2020 ರಂದು ಕಛೇರಿ ಅವಧಿಯೊಳಗೆ ಸಲ್ಲಿಸಲು ಸೂಚಿಸಿದೆ. ಸದರಿ ಪಟ್ಟಿಯನ್ನು ಈ ಕಾರ್ಯಾಲಯದ ವೆಬ್‌ಸೈಟ್ (www.ddpikalaburgi.in)ದಲ್ಲಿ ಗಮನಿಸಬಹುದು.

7) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಮುಖ್ಯ ಶಿಕ್ಷಕರ ಸೇವಾ ಮಾಹಿತಿಯು ಜಿಲ್ಲೆಯ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಒದಗಿಸಿರುವ ಮಾಹಿತಿಯನ್ನಾಧರಿಸಿ ಜೇಷ್ಠತಾ ಪಟ್ಟಿಯಲ್ಲಿ ನಿಗದಿಪಡಿಸಿದಂತೆ ಸಿದ್ಧಪಡಿಸಲಾಗಿದೆ.

8) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಮುಖ್ಯ ಶಿಕ್ಷಕರ ಸೇವಾ ವಿವರ ಮಾಹಿತಿ ಜನ್ಮ ದಿನಾಂಕ, ಸೇವೆಗೆ ಸೇರಿದ ದಿನಾಂಕ, ಬಡ್ತಿ ಪಡೆದ ದಿನಾಂಕ ಮತ್ತು ಜೇಷ್ಠತಾ ಕ್ರಮಾಂಕಗಳ ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿದೆ.

9) ಮೂಲ ವೃಂದ, ಸ್ಥಳಿಯ ವೃಂದ ಮತ್ತು ಉಳಿದ ಮೂಲ ವೃಂದದ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದಂತೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ದಾಖಲೆಗಳನ್ನು ಪರಿಶೀಲನೆಗೆ ಒಪ್ಪಿಸುವ ಷರತ್ತಿಗೆ ಒಳಪಟ್ಟಿದೆ. ಹಾಗೂ ಈ ಜೇಷ್ಠತಾ ಪಟ್ಟಿಯಲ್ಲಿ ಯಾವುದೇ ತರಹದ ದೋಷಗಳನ್ನು ಕಂಡು ಬಂದಲ್ಲಿ ಅದನ್ನು ಸರಿಪಡಿಸುವ ಅಧಿಕಾರವನ್ನು ಇಲಾಖೆಯು ಕಾಯ್ದಿರಿಸಿಕೊಂಡಿದೆ.

10) ಈ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಗೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳನ್ನು ಸಲ್ಲಿಸತಕ್ಕದ್ದು. ಒಂದು ವೇಳೆ ನಿಗದಿತ ಅವಧಿಯಲ್ಲಿ ಆಕ್ಷೇಪಣೆಗಳು ಸಲ್ಲಿಕೆಯಾಗದಿದ್ದಲ್ಲಿ ಈ ಮಾಹಿತಿ ಸರಿ ಇರುವುದು ಎಂದು ಪರಿಗಣಿಸಿ ಹಾಗೂ ಅದಕ್ಕೆ ಸಂಬಂಧಪಟ್ಟ ಮುಖ್ಯ ಶಿಕ್ಷಕರುಗಳು ಹಾಗೂ ಕ್ಷೇತ್ರ ಶಿಕ್ಷಣಾಧಿಕಾರಿಗಳು ಜವಾಬ್ದಾರರನ್ನಾಗಿಸಿ ಈ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

11) ಆಕ್ಷೇಪಣೆಯನ್ನು ಸಲ್ಲಿಸುವವರು ಈ ಅಧಿಸೂಚನೆಯೊಂದಿಗೆ ನೀಡಲಾದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಮಾಹಿತಿ ಭರಿಸಿ, ಮಾಹಿತಿಯನ್ನು ಪುಷ್ಠೀಕರಿಸುವ ದಾಖಲೆಗಳೊಂದಿಗೆ ಸಲ್ಲಿಸುವುದು.

12) ಈ ತಾತ್ಕಾಲಿಕ ಅಂತಿಮ ಪಟ್ಟಿಯಲ್ಲಿ ಯಾವುದೇ ನಮೂದುಗಳು/ಮಾಹಿತಿ ಸರಿ ಇರದೇ ಇದ್ದಲ್ಲಿ, ಸರಿಪಡಿಸಲು ಪುಷ್ಠೀಕರಿಸುವ ದಾಖಲೆಗಳೊಂದಿಗೆ ಆಕ್ಷೇಪಣೆಗಳನ್ನು ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ವಿಳಾಸಕ್ಕೆ ***ಸ್ಪೀಡ್ ಪೋಸ್ಟ*** ಮೂಲಕ ಅಥವಾ ನೇರವಾಗಿ ಈ ಕಾರ್ಯಾಲಯಕ್ಕೆ ದಿನಾಂಕ:27-07-2020 ರೊಳಗಾಗಿ ತಲುಪುವಂತೆ ಸಲ್ಲಿಸುವುದು. ನಿಗದಿತ ಅವಧಿಯೊಳಗಾಗಿ ಆಕ್ಷೇಪಣೆಗಳನ್ನು ಸಲ್ಲಿಸದೇ ಇದ್ದಲ್ಲಿ ಪ್ರಸ್ತುತ ಪ್ರಕಟಿಸಿದ ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿನ ಮಾಹಿತಿ ಸರಿಯೆಂದು ಪರಿಗಣಿಸಿ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

23/7/2020

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಸಿ1(1)/ಆಡಳಿತ/ಪ್ರಾಶಾಮುಶಿ/ಬಡ್ತಿ/05/2020-21 ದಿನಾಂಕ:23-07-2020

**-: ಸೂಚನಾ ಪತ್ರ :-**

***ಆಕ್ಷೇಪಣೆ ಸಲ್ಲಿಸುವ ಮುಖ್ಯ ಶಿಕ್ಷಕರಿಗೆ ಈ ಕೆಳಗಿನ ಅಂಶಗಳನ್ನು ಪಾಲಿಸಲು ತಿಳಿಸಿದೆ.***

1) ಆಕ್ಷೇಪಣೆಯನ್ನು ಅಧಿಸೂಚನೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಕಡ್ಡಾಯವಾಗಿ ಮಾಹಿತಿ ಭರಿಸಿ, 19 ಅಂಕಣದಲ್ಲಿ ಸರಿಪಡಿಸಬೇಕಾದ ಅಂಗಳನ್ನು ನಮೂದಿಸತಕ್ಕದ್ದು, ಅದಕ್ಕೆ ಪೂರಕ ದಾಳಕೆಗಳನ್ನು ಕೂಡಾ ಸಲ್ಲಿಸುವುದು.
2) ಆಕ್ಷೇಪಣೆಯನ್ನು ಸಲ್ಲಿಸುವಾಗ ನನಗಿಂತ ಕಿರಿಯರು ಮೇಲೆ ಬಂದಿದ್ದಾರೆಂದು ಅಂದಾಜಿನ ಮೇಲೆ ಆಕ್ಷೇಪಣೆಯನ್ನು ಸಲ್ಲಿಸಿದ್ದಲ್ಲಿ ಪರಿಗಣಿಸುವುದಿಲ್ಲ. ಆಕ್ಷೇಪಣೆ ಸಲ್ಲಿಸುವ ಶಿಕ್ಷಕರ ಮತ್ತು ತಮಗಿಂತ ಕಿರಿಯ ಶಿಕ್ಷಕರು ಮೇಲೆ ಬಂದಿದ್ದಾರೆಂದು ಆಕ್ಷೇಪಿಸಲಾದ ಶಿಕ್ಷಕರ ನಿಖರವಾದ ಸೇವಾ ವಿವರಗಳನ್ನು ಮತ್ತು ಪುಷ್ಠೀಕರಿಸುವ ದಾಖಲೆಗಳೊಂದಿಗೆ ತಪ್ಪದೇ ಈ ಅಧಿಸೂಚನೆಯೊಂದಿಗೆ ಲಗತ್ತಿಸಿದ ನಮೂನೆಯಲ್ಲಿ ಎಲ್ಲಾ ಅಂಕಣದಲ್ಲಿ ಕಡ್ಡಾಯವಾಗಿ ಮಾಹಿತಿ ಭರಿಸಿ, 19 ಅಂಕಣದಲ್ಲಿ ಸರಿಪಡಿಸಬೇಕಾದ ಅಂಶಗಳನ್ನು ನಮೂದಿಸಿ ಸಲ್ಲಿಸುವುದು.
3) ಆಕ್ಷೇಪಣೆಯನ್ನು ಈ ಕಾರ್ಯಾಲಯದ ವಿಳಾಸಕ್ಕೆ ಉಪ ನಿರ್ದೇಶಕರು(ಆಡಳಿತ) ಸಾರ್ವಜನಿಕ ಶಿಕ್ಷಣ ಇಲಾಖೆ ಕಲಬುರಗಿ ಇವರ ವಿಳಾಸಕ್ಕೆ ಸ್ಪೀಡ್ ಪೋಸ್ಟ ಮೂಲಕ ಇಲ್ಲವೇ ನೇರವಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸುವುದು.
4) ಆಕ್ಷೇಪಣೆಯನ್ನು ದಿನಾಂಕ:23-07-2020 ರೊಳಗಾಗಿ ಈ ಕಾರ್ಯಾಲಯಕ್ಕೆ ತಲುಪುವಂತೆ ಸಲ್ಲಿಸುವುದು. ಅವಧಿಯೊಳಗೆ ಬಂದ ಆಕ್ಷೇಪಣೆಗಳನ್ನು ಮಾತ್ರ ಪರಿಶೀಲಿಸಲಾಗುವುದು.
5) ದಿನಾಂಕ:23-07-2020 ರೊಳಗಾಗಿ ತಲುಪುವಂತೆ ಆಕ್ಷೇಪಣೆಗಳನ್ನು ಸಲ್ಲಿಸದೇ ಇದ್ದಲ್ಲಿ ಆಯಾ ಮುಖ್ಯ ಶಿಕ್ಷಕರ ಮತ್ತು ಕ್ಷೇತ್ರ ಶಿಕ್ಷಣಾಧಿಕಾರಿಗಳ ವೈಯಕ್ತಿಕ ಜವಾಬ್ದಾರಿಯ ಮೇರೆಗೆ ಮತ್ತು ಪ್ರಸ್ತುತ ಪ್ರಕಟಿಸಲಾದ ತಾತ್ಕಾಲಿಕ ಅಂತಿಮ ಜೇಷ್ಠತಾ ಪಟ್ಟಿಯಲ್ಲಿನ ಸೇವಾ ವಿವರಗಳು ಸರಿಯಿರುತ್ತವೆಯೆಂದು ಪರಿಗಣಿಸಿ ಜೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸಲಾಗುವುದು.

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

## ಆಕ್ಷೇಪಣೆ ಸಲ್ಲಿಸುವ ನಮೂನೆ

(**ವಿಸೂ:** ಆಕ್ಷೇಪಣೆಯನ್ನು ಸ್ಪೀಡ್ ಪೋಸ್ಟ ಮೂಲಕ ಅಥವಾ ನೇರವಾಗಿ ಸಲ್ಲಿಸುವುದು)

ಸರ್ಕಾರಿ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಸೇವಾ ವಿವರ

<table>
<tr><td>1</td><td>ಮುಖ್ಯ ಶಿಕ್ಷಕರ ಹೆಸರು</td><td colspan="3"></td></tr>
<tr><td>2</td><td>ಮೋಬೈಲ್ ಸಂಖ್ಯೆ</td><td colspan="3"></td></tr>
<tr><td>3</td><td>ಈಗಾಗಲೇ ಪ್ರಕಟಿಸಲಾದ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದ KGID ಸಂಖ್ಯೆ</td><td colspan="3"></td></tr>
<tr><td>4</td><td>ಈಗಾಗಲೇ ಜೇಷ್ಠತಾ ಪಟ್ಟಿಯಲ್ಲಿ ನಮೂದಿಸಿದ KGID ಸಂಖ್ಯೆ ಮೊದಲನೆಯ KGID ಸಂಖ್ಯೆ ಆಗಿರದಿದ್ದಲ್ಲಿ ಮೊದಲ KGID ಸಂಖ್ಯೆ ನಮೂದಿಸುವುದು.</td><td colspan="3"></td></tr>
<tr><td rowspan="2">5</td><td rowspan="2">ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಶಾಲೆಯ ವಿಳಾಸ</td><td>ಸರಕಾರಿ ಪ್ರಾಥಮಿಕ ಶಾಲೆ</td><td>ಗ್ರಾಮ</td><td>ತಾಲ್ಲೂಕು</td></tr>
<tr><td></td><td></td><td></td></tr>
<tr><td>6</td><td>ಸೇವೆಗೆ ಸೇರಿದ ದಿನಾಂಕ</td><td colspan="3"></td></tr>
<tr><td>7</td><td>ಸೇವಾ ಸಕ್ರಮಗೊಂಡ ದಿನಾಂಕ</td><td colspan="3"></td></tr>
<tr><td>8</td><td>ಮುಖ್ಯ ಶಿಕ್ಷಕರ ಹುದ್ದೆಗೆ ಹಾಜರಾದ ದಿನಾಂಕ</td><td colspan="3"></td></tr>
<tr><td rowspan="2">9</td><td rowspan="2">ಸೇವಾ ಪುಸ್ತಕದಲ್ಲಿ ಇರುವಂತೆ ಸ್ವಂತ ಊರು</td><td>ಸ್ವಂತ ಊರು</td><td>ತಾಲ್ಲೂಕು</td><td>ಜಿಲ್ಲೆ</td></tr>
<tr><td></td><td></td><td></td></tr>
<tr><td rowspan="2">10</td><td rowspan="2">ದಿನಾಂಕ:01-01-2015ರಇದ್ದಂತೆ ಸ್ಥಳೀಯ ವೃಂದ/ಉಳಿದ ಮೂಲ ವೃಂದಲ್ಲಿ ಇರಲು ಬಯಸಿದ ಬಗ್ಗೆ ಅಭಿಮತ ಪತ್ರದಂತೆ</td><td>ಸ್ಥಳಿಯ ವೃಂದದಲ್ಲಿ ಇರಲು ಬಯಸಲಾಗಿದೆ(ಹೆಚ್.ಕೆ)</td><td colspan="2">ಉಳಿದ ಮೂಲ ವೃಂದದಲ್ಲಿ ಇರಲು ಬಯಸಲಾಗಿದೆ(ಎನ್.ಹೆಚ್.ಕೆ)</td></tr>
<tr><td></td><td colspan="2"></td></tr>
<tr><td>11</td><td>ತಾತ್ಕಾಲಿಕ ಜೇಷ್ಠತಾ ಪಟ್ಟಿಯಲ್ಲಿ ಕಂಡುಬಂದ ನಮೂದುಗಳು ಹಾಗೂ ಸರಿಪಡಿಸಬೇಕಾದ ಅಂಶಗಳು.</td><td colspan="3"></td></tr>
<tr><td>12</td><td>ಷರಾ</td><td colspan="3"></td></tr>
<tr><td>13</td><td>ಮುಖ್ಯ ಶಿಕ್ಷಕರ ರುಜು</td><td colspan="3"></td></tr>
</table>

ಕರ್ನಾಟಕ ಸರ್ಕಾರ

# ಸಾರ್ವಜನಿಕ ಶಿಕ್ಷಣ ಇಲಾಖೆ ಉಪ ನಿರ್ದೇಶಕರು(ಆಡಳಿತ) ರವರ ಕಾರ್ಯಾಲಯ ಕಲಬುರಗಿ

ಸಂಖ್ಯೆ:ಸಿ1(1)/ಆಡಳಿತ/ಪ್ರಾಶಾಮುಶಿ/ಬಡ್ತಿ/05/2020-21 ದಿನಾಂಕ:23-07-2020

## ಅಧಿಸೂಚನೆ

ವಿಷಯ:-ದಿನಾಂಕ:01-01-2020 ರಲ್ಲಿದ್ದಂತೆ ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯಿಂದ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನಿಡುವ ಸಂಬಂಧ ತಯ್ಯಾರಿಸಿದ 1:2ರ ತಾತ್ಕಾಲಿಕ ಅರ್ಹತಾ ಪಟ್ಟಿ ಪ್ರಕಟಿಸುವ ಬಗ್ಗೆ.

ಉಲ್ಲೇಖ:-1)ಕರ್ನಾಟಕ ಸರ್ಕಾರಿ ನೌಕರರ(ಜೇಷ್ಠತಾ)ನಿಯಮಗಳು 1957 ನಿಯಮ(5) ರಂತೆ.
2)ಸರ್ಕಾರಿ ಪತ್ರ ಸಂಖ್ಯೆ:ಇಡಿ 202 ಎಸ್ಎಲ್‌ಬಿ 2014 ದಿನಾಂಕ:20-05-2014.
3)ಸರ್ಕಾರಿ ಪತ್ರ ಸಂಖ್ಯೆ:ಇಡಿ 152 ಎಲ್‌ಬಿಪಿ 2014 ದಿನಾಂಕ:20-05-2014.
4)ಸರ್ಕಾರದ ಪತ್ರ ಸಂಖ್ಯೆ:ಡಿ.ಪಿ.ಎ.ಆರ್186ಎಸ್.ಆರ್.ಎಸ್2018 ಬೆಂಗಳೂರು ದಿ:15-05-2019.
5)ಈ ಕಛೇರಿಯ ಅಧಿಸೂಚನೆ ದಿನಾಂಕ:03-06-2020, 23-07-2020.

– * * * * * –

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ದಿನಾಂಕ:01-01-2020 ರಲ್ಲಿದ್ದಂತೆ ಕಲಬುರಗಿ ಜಿಲ್ಲೆಯ ವ್ಯಾಪ್ತಿಯ ಸರಕಾರಿ ಕನ್ನಡ ಹಿರಿಯ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರ ಹುದ್ದೆಯಿಂದ ಹಿರಿಯ ಮುಖ್ಯ ಶಿಕ್ಷಕರ ಹುದ್ದೆಗೆ ಬಡ್ತಿ ನೀಡುವ ಸಂಬಂಧ ತಯ್ಯಾರಿಸಿದ 1:2ರ ತಾತ್ಕಾಲಿಕ ಅರ್ಹತಾ ಪಟ್ಟಿಯನ್ನು ದಿನಾಂಕ:23-07-2020 ರಂದು ಪ್ರಕಟಿಸಲಾಗಿದೆ. ಸದರಿ ಪಟ್ಟಿಯನ್ನು ಈ ಕಾರ್ಯಾಲಯದ ವೆಬ್‌ಸೈಟ್ (www.ddpikalaburgi.in)ದಲ್ಲಿ ಗಮನಿಸಬಹುದು. ಪ್ರಕಟಿಸಲಾದ ತಾತ್ಕಾಲಿಕ ಅರ್ಹತಾ ಪಟ್ಟಿಗೆ ಸಂಬಂಧಿಸಿದಂತೆ ಯಾವುದಾದರೂ ಆಕ್ಷೇಪಣೆಗಳಿದ್ದಲ್ಲಿ ದಿನಾಂಕ:27-07-2020ರ ಒಳಗಾಗಿ ನೇರವಾಗಿ ಈ ಕಛೇರಿಗೆ ಸೂಕ್ತ ದಾಖಲೆಗಳೊಂದಿಗೆ ಸಲ್ಲಿಸತಕ್ಕದ್ದು. ನಂತರ ಬಂದ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ತಾತ್ಕಾಲಿಕ ಅರ್ಹತಾ ಪಟ್ಟಿಯಲ್ಲಿರುವ ಮುಖ್ಯ ಶಿಕ್ಷಕರು 5 ವರ್ಷಗಳ ಗೌಪ್ಯ ವರದಿಯನ್ನು ದಿನಾಂಕ:27-07-2020ರ ಒಳಗಾಗಿ ಈ ಕಛೇರಿಗೆ ಸಂಬಂಧಿಸಿದ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ಸಲ್ಲಿಸತಕ್ಕದ್ದು ಅಥವಾ ಬಡ್ತಿ ನಿರಾರಣೆ ಕುರಿತು ತಮ್ಮ ಅಭಿಮತ ಪತ್ರವನ್ನು ನೀಡತಕ್ಕದ್ದು. ನಿಗದಿತ ಅವಧಿಯೊಳಗೆ ಗೌಪ್ಯ ವರದಿ ಸಲ್ಲಿಸದಿದ್ದಲ್ಲಿ ಬಡ್ತಿ ನಿರಾಕರಿಸಿರುತ್ತಾರೆ ಎಂದು ಪರಿಗಣಿಸಲಾಗುವುದು.

23/7/2020

ಉಪ ನಿರ್ದೇಶಕರು(ಆಡಳಿತ)
ಸಾರ್ವಜನಿಕ ಶಿಕ್ಷಣ ಇಲಾಖೆ
ಕಲಬುರಗಿ

ಗೆ,

1) ಜಿಲ್ಲೆಯ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ.
2) ಈ ಕಛೇರಿಯ ಇ-ಗೌರ್ನರ್ಸಕ್ಕೆ ಕೊಡುತ್ತಾ ಈ ಕಾರ್ಯಾಲಯದಲ್ಲಿ ವೆಬ್‌ಸೈಟ್‌ದಲ್ಲಿ ಪ್ರಕಟಿಸಲು ತಿಳಿಸಿದೆ.

ಪ್ರತಿಯನ್ನು:-

1) ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ) ಶಿಕ್ಷಣ ಇಲಾಖೆಯ ಸಚಿವಾಲಯ ಬಹುಮಹಡಿಗಳ ಕಟ್ಟಡ ಬೆಂಗಳೂರು ಇವರಿಗೆ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
2) ಮಾನ್ಯ ಆಯುಕ್ತರು ಬೆಂಗಳೂರು ಹಾಗೂ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
3) ಮಾನ್ಯ ನಿರ್ದೇಶಕರು ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.
4) ಮಾನ್ಯ ಸಹ ನಿರ್ದೇಶಕರು(ಆಡಳಿತ) ಅಪರ ಆಯುಕ್ತರ ಕಛೇರಿ ಕಲಬುರಗಿ ರವರ ದಯಾಪರ ಮಾಹಿತಿಗಾಗಿ ಸಲ್ಲಿಸಿದೆ.